ಈ) ಈ ಯೋಜನೆಯಲ್ಲಿ ತುರುವೇಕರೆ ತಾಲ್ಲೂಕನ್ನು ಸೇರಿಸಲಾಗಿದೆಯೇ?

ಉ) ಯಾವಾಗಿನಿಂದ ಈ ಯೋಜನೆ ಕೈಗೆತ್ತಿಕೊಳ್ಳಲಾಗುವುದು?

ಊ) ತಕ್ಷಣ ಪ್ರಾರಂಭ ಮಾಡಿ ಜನರ ಸಮಸ್ಯೆ ನಿವಾರಣೆ ಮಾಡಲಾಗುವುದೇ?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಹೌದು, ಸರ್ಕಾರದ ಗಮನಕ್ಕೆ ಬಂದಿದೆ.

ಆ) ವೋಲ್ಟೇಜ್ ಕೊರತೆ ನೀಗಿಸುವ ಸಲುವಾಗಿ ದಬ್ಬೆಘಟ್ಟ ಬಿನಗೋನಹಳ್ಳಿ, ಚಿಕ್ಕಬಿನಕನಹಳ್ಳಿ ಕೊಂಡಜ್ಜಿ ಅಮಗಾರಕನಹಳ್ಳಿ ಗ್ರಾಮಗಳಿಗೆ ಹೊಂದುವಂತೆ 12.4 ಕಿ.ಮೀ . 11. ಕೆ.ವಿ. ಲಿಂಕ್ ಲೈನ್ ಎಕ್ಸ್‌ಪ್ರೆಸ್ ಲೈನ್‌ಗಳನ್ನು 2002-03ನೇ ಸಾಲಿನಲ್ಲಿ ನಿರ್ಮಿಸಲಾಗಿದ್ದು, ವೋಲ್ಟೇಜ್‌ನಲ್ಲಿ ಸುಧಾರಣೇ ಕಂಡುಬಂದಿದೆ. ಉಳಿದಂತೆ ಸಿದ್ದನಹಟ್ಟಿ ಹಾಗೂ ಶೆಟ್ಟರಪಾಳ್ಯಕ್ಕೆ ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸಲು ಅಂದಾಜು ಪಟ್ಟಿ ಸಲ್ಲಿಸಲಾಗುತ್ತಿದೆ (1.75. ಕಿ.ಮೀ. 11 ಕೆ.ವಿಲ ಲೈನ್) ಅನೇಕರೆಪಾಳ್ಯಕ್ಕೆ ಹೊಸದಾಗಿ ಪರಿವರ್ತಕವನ್ನು ಅಳವಡಿಸುವ ಸಲುವಾಗಿ 1 ಕಿ.ಮೀ. 11. ಕೆ.ವಿ. ಲೈನ್‌ಗೆ ಅಗತ್ಯವಿರುವ ಕಾಮಗಾರಿ ಅಂದಾಜು ಪಟ್ಟಿ ತಯಾರಿಸಲಾಗುತ್ತಿದೆ.

ಮಣಿಚಂದ್ರಗಿರಿನಿಂದ ಶೆಟ್ಟಿ ಗೊಂಡನಪಾಳ್ಯದವರೆಗೆ 4.6 ಕಿ.ಮೀ ಲಿಂಕ್ ಲೈನ್ ಕಾಮಗಾರಿಯು ಪ್ರಗತಿಯಲ್ಲಿದೆ. 11. ಕೆ.ವಿ. ಲೈನ್ ಅಗತ್ಯವಿರುವ ಕಾಮಗಾರಿಗಾಗಿ ಅಂದಾಜು ಪಟ್ಟಿ ತಯಾರಿಸಲಾಗುತ್ತಿದೆ. ಸಂಪಿಗೆಯಿಂದ ಹಳೆಸಂಪಿಗೆಗೆ 1.3 ಕಿ.ಮೀ 11 ಕೆ.ವಿ. ಲೈನ್ ನಿರ್ಮಾಣ ಕೆಲಸ ಪ್ರಗತಿಯಲ್ಲಿದೆ.

ಇ) ಹೌದು, ತ್ವರಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣೆ ಯೋಜನೆ ಮುಖಾಂತರ ಈ ಸಮಸ್ಯೆಗಳನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ಯೋಜನೆಯ ವಿವರಗಳನ್ನು ತಯಾರಿಸಿ ಇದನ್ನು ಸಿಇಎ: ಎಂಒಪಿ ಗೆ ಕಳುಹಿಸಲಾಗುವುದು.

ಈ) ಈ ಯೋಜನೆಯಲ್ಲಿ ತುರುವೆಕೆರೆ ತಾಲ್ಲೂಕನ್ನು ಸೇರಿಸುವ ಪ್ರಸ್ತಾವನೆಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಸಲ್ಲಿಸಲಾಗಿದೆ.

ಉ) ಮೇಲಿನ ಪ್ರಸ್ತಾವನೆಗೆ ಅನುಮೋದನೆ ದೊರೆತ ನಂತರ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುತ್ತದೆ.

ಊ) ಅನುಮೋದನೆ ದೊರೆತ ನಂತರ ನಿಗಮ ನಿಯಮಾವಳಿಗನುಸಾರವಾಗಿ ಕೆಲಸವನ್ನು ಏಜೆನ್ಸಿಗೆ ವಹಿಸಿದ ನಂತರ ಪ್ರಾರಂಭಿಸಲಾಗುವುದು.

ಶಿಕಾರಿಪುರ ತಾಲ್ಲೂಕಿನಲ್ಲಿ ವಿದ್ಯುತ್ ಲೈನ್‌ಗಳ ನಿರ್ಮಾಣ

1375 (884) ಶ್ರೀ ಮಹಾಲಿಂಗಪ್ಪ ಬಿ.ಎನ್. (ಶಿಕಾರಿಪುರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ, ಕೊರಟಗೆರೆ ಶೆಟ್ಟರಹಳ್ಳಿ ಈಸೂರುಗಳಲ್ಲಿ ವಿದ್ಯುತ್ ಲೈನ್ ಕಾಮಗಾರಿ ಕೆಲಸ ಪ್ರರಂಭವಾಗದಿರಲು ಕಾರಣವೇನು?

ಆ) ಮೇಲ್ಕಂಡ ಕಾಮಗಾರಿಗಳು ಎಂದಿನಿಂದ ಪ್ರಾರಂಭವಾಗುತ್ತವೆ.?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಶಿಕಾರಿಪುರ 110 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ನಿಗೆ ಸಂಬಂಧಿಸಿದ 110 ಕೆ.ವಿ. ಶಿರಾಳಕೊಪ್ಪ ಶಿಕಾರಿಪುರ ಲೈನ್ ಕಾಮಗಾರಿ ಮುಕ್ತಾಯಗೊಂಡಿದ್ದು, ಸದರಿ ವಿದ್ಯುತ್ ಲೈನ್ ಆಗಸ್ಟ್ 2001 ರಿಂದ ಚಾಲನೆಯಲ್ಲಿದೆ.

ಕೊರಟಗೆರೆ ಮತ್ತು ಈಸೂರುಗಳಲ್ಲಿ ವಿದ್ಯುತ್ ಸಬ್ ಸ್ಟೇಷನ್ನುಗಳ ನಿರ್ಮಾಣಕ್ಕೆ ಬೇಕಾಗುವ ಭೂಮಿಯನ್ನು ಗುರುತಿಸಲಾಗಿದ್ದು, ಭೂ ಸ್ವಾಧೀನ ಪ್ರಕ್ರಿಯೆಯು ಜಾರಿಯಲ್ಲಿದೆ. ಭೂ ಸ್ವಾಧೀನ ಪ್ರಕ್ರಿಯೆಯು ಪೂರ್ಣಗೊಂಡ ನಂತರ, ಇವುಗಳಿಗೆ ಸಂಬಂಧಿಸಿದ ವಿದ್ಯುತ್ ಲೈನುಗಳ ಪೂರ್ಣ ಪ್ರಮಾಣದ ಸರ್ವೆ ಕಾರ್ಯವನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ.

ಶೆಟ್ಟರಹಳ್ಳಿಯಲ್ಲಿ ವಿದ್ಯುತ್ ಸಬ್ ಸ್ಟೇಷನ್ ಸ್ಥಾಪಿಸುವ ಪ್ರಸ್ತಾವನೆ ಇಲ್ಲ. ಆದುದರಿಂದ ವಿದ್ಯುತ್ ಲೈನಿನ ಕಾಮಗಾರಿಯ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಕೊರಟಗೆರೆ ಮತ್ತು ಈ ಸೂರುಗಳಲ್ಲಿ ವಿದ್ಯುತ್ ಸಬ್ ಸ್ಟೇಷನ್ನುಗಳ ಸ್ಥಾಪನೆ ಮತ್ತು ಇವುಗಳಿಗೆ ಸಂಬಂಧಿಸಿದ ವಿದ್ಯುತ್ ಲೈನುಗಳ ನಿರ್ಮಾಣಕ್ಕೆ ಹಣಕಾಸಿನ ವ್ಯವಸ್ಥೆ ಆಗಬೇಕಾಗಿರುತ್ತದೆ. ಹಣಕಾಸಿನ ವ್ಯವಸ್ಥೆ ಆದ ನಂತರ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತದೆ.

ಶಿಕಾರಿಪುರ ತಾಲ್ಲೂಕಿನಲ್ಲಿ ಹುಡ್ಕೋ ನೆರವಿನ ಕಾಮಗಾರಿಗಳು

1376 (1965) ಶ್ರೀ ಮಹಾಲಿಂಗಪ್ಪ ಬಿ.ಎನ್. (ಶಿಕಾರಿಪುರ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ಪುರಸಭೆ, ಶಿಕಾರಿಕೊಪ್ಪ ಪಟ್ಟಣ ಪಂಚಾಯತಿಗೆ ಹುಡ್ಕೋದಿಂದ ಮಂಜೂರಾದ ಕಾಮಗಾರಿಗಳ ಸಂಖ್ಯೆ ಮತ್ತು ಹಣ ಎಷ್ಟು?

ಆ) ಕಾಮಗಾರಿಗಳು ಪೂರ್ಣಗೊಂಡಿದೆಯೇ?

ಇ) ಪೂರ್ಣಗೊಳ್ಳದಿದ್ದಲ್ಲಿ ಕಾರಣವೇನು?

ಈ) ಕಳಪೆ ಕಾಮಗಾರಿಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಪೌರಾಡಳಿತ ರಾಜ್ಯ ಸಚಿವರು) :

ಅ) ಈ ಪಟ್ಟಣಗಳಲ್ಲಿ ತಲಾ 3 ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ಶಿಕಾರಿಪುರ ಪುರಸಭೆಗೆ ರೂ. 50.00 ಲಕ್ಷಗಳನ್ನು ಹಾಗೂ ಶಿರಾಳಕೊಪ್ಪ ಪಟ್ಟಣ ಪಂಚಾಯತಿಗೆ ರೂ. 25.00 ಲಕ್ಷಗಳನ್ನು ನಿಗದಿ ಪಡಿಸಲಾಗಿದ್ದು, ಟೆಂಡರ್ ಪ್ರೀಮಿಯಂ ಸೇರಿ ಇದು ಕ್ರಮವಾಗಿ ರೂ. 65.00 ಲಕ್ಷಗಳು ಹಾಗೂ ರೂ. 32.50 ಲಕ್ಷಗಳಾಗುತ್ತಿದೆ.

ಆ) ಕೆಲಸಗಳು ಪ್ರಗತಿಯಲ್ಲಿದ್ದು ಭಾಗಶಃ ಪೂರ್ಣಗೊಂಡಿದೆ.

ಇ) ಶಿಕಾರಿಪುರ ಪಟ್ಟಣದಲ್ಲಿ ಸ್ಥಳೀಯ ಸಂಸ್ಥೆಯವರು ಕಾಮಗಾರಿಯನ್ನು ಬದಲಾಯಿಸಿದ್ದು ಹಾಗೂ ಮಾರ್ಕೆಟ್ ಜಾಗ ಇನ್ನೂ ಹಸ್ತಾಂತರಿಸದ ಕಾರಣ ಕಾಮಗಾರಿಗಳಲ್ಲಿ ವಿಳಂಬವಾಗಿದೆ.

ಶಿರಾಳಕೊಪ್ಪ ಪಟ್ಟಣ ಪಂಚಾಯತಿಯಲ್ಲಿ ಮಳೆಗಾಲದ ಪ್ರಯುಕ್ತ ಕೆಲಸದ ಪ್ರಗತಿಯಲ್ಲಿ ವಿಳಂಬವಾಗಿತ್ತು. ಗುತ್ತಿಗೆದಾರರು ಕೆಲಸವನ್ನು ಪ್ರಾರಂಭಿಸಲು ತಡವಾಯಿತು.

ಈ) ಬಂದಿದೆ.

ಉ) ಸರಿಪಡಿಸಲು ಕ್ರಮ ಕೈಗೊಳ್ಳಲಾಗಿದೆ.